# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ದೂರವಾಣಿ ಸಂಖ್ಯೆ : 0836-2322771
ಫ್ಯಾಕ್ಸ್ ನಂ : 0836-2324307
Web Site : hescom.co.in

ನಿಗಮ ಕಛೇರಿ,
ಪಿ. ಬಿ. ರೋಡ ನವನಗರ, ಹುಬ್ಬಳ್ಳಿ 580 025.
Email ID : dcarev12@rediffmail.com

ಪ.ಸಂ : ಹುವಿಸಕಂನಿ/ವ್ಯ.ನಿ/ಆಸ/ನಿ(ಕಂ&ಲೆ)/ಉಲೆನಿ(ಕಂ)/12-13/೮೪೬-೨೦೧೦ ದಿನಾಂಕ : 10 DEC 2012

## ನಿಗಮ ಕಛೇರಿ, ಹುಬ್ಬಳ್ಳಿಯಲ್ಲಿ ದಿನಾಂಕ 28-11-2012 ರಂದು ಜರುಗಿದ ಕಂದಾಯ ಪರಿಶೀಲನಾ ಸಭೆಯ ನಡಾವಳಿಗಳು

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅಧ್ಯಕ್ಷತೆಯಲ್ಲಿ ದಿನಾಂಕ : 28-11-2012 ರಂದು ನಿಗಮ ಕಛೇರಿಯ ಸಭಾಂಗಣದಲ್ಲಿ ವಲಯ/ವೃತ್ತದ ಅಧಿಕಾರಿಗಳೊಂದಿಗೆ ಅಕ್ಟೋಬರ್-2012 ರ ತಿಂಗಳಿನ ಕಂದಾಯ ಪರಿಶೀಲನಾ ಸಭೆಯು ಜರುಗಿದ್ದು, ಅಕ್ಟೋಬರ್-2012 ರ ಕಂದಾಯ ಬೇಡಿಕೆ, ವಸೂಲಾತಿ, ಗುರಿ, ಅಂತಿಮ ಶಿಲ್ಕು ಹಾಗೂ ಇತರೆ ವಿಷಯಗಳ ಕುರಿತು ಚರ್ಚಿಸಿದ್ದು, ನಡಾವಳಿಗಳು ಕೆಳಗಿನಂತಿವೆ.

1. **ಅಜೇಂಡಾ 1 ಬಿ : ಅಕ್ಟೋಬರ್-2012 ರ ಅಂತ್ಯಕ್ಕೆ ಎಲ್.ಟಿ-2 ಜಕಾತಿ ಸ್ಥಾವರಗಳ ಬಾಕಿ ವಸೂಲಾತಿ ಕಂದಾಯ ಕುರಿತು ಚರ್ಚೆ :**

ವೃತ್ತವಾರು ಎಲ್.ಟಿ-2 ಜಕಾತಿಯಲ್ಲಿ ಕಂಡು ಬಂದ ನಿಗದಿತ ವಸೂಲಾತಿ ಗುರಿ, ಬೇಡಿಕೆ, ವಸೂಲಿ, ಬಾಕಿ ವಿವರ :

**(Amt in lakhs)**

| Name of the Circle | Target | OB | Demand | Colln | % of Target achievement | Total CB | Net CB | Net CB Ratio |
|---|---|---|---|---|---|---|---|---|
| Belgaum Circle | 922.24 | 405.56 | 817.52 | 802.79 | 87.05 | 420.29 | 268.14 | 0.33 |
| Chikkodi Circle | 338.27 | 513.42 | 221.32 | 234.16 | 69.22 | 500.58 | 209.67 | 0.95 |
| Bijapur Circle | 693.28 | 1338.19 | 402.95 | 378.25 | 54.56 | 1362.89 | 956.77 | 2.37 |
| Bagalkot Circle | 586.43 | 1143.14 | 358.60 | 360.32 | 61.44 | 1141.42 | 558.65 | 1.56 |
| **Belgaum Zone Total** | **2540.21** | **3400.31** | **1800.39** | **1775.52** | **69.90** | **3425.18** | **1993.23** | **1.11** |
| Hubli Circle | 1308.80 | 1711.90 | 334.66 | 324.61 | 24.80 | 1721.95 | 1094.33 | 3.27 |
| Haveri Circle | 326.28 | 467.44 | 210.76 | 222.32 | 68.14 | 455.88 | 190.55 | 0.90 |
| Sirsi Circle | 595.18 | 324.32 | 536.71 | 541.17 | 90.93 | 319.86 | 270.62 | 0.50 |
| **Hubli Zone Total** | **2230.25** | **2503.66** | **1082.12** | **1088.10** | **48.79** | **2497.69** | **1555.50** | **1.44** |

- ವೃತ್ತವಾರು ಅಕ್ಟೋಬರ್-2012 ರ ಅಂತ್ಯಕ್ಕೆ ಎಲ್.ಟಿ-2 ಜಕಾತಿಯಲ್ಲಿ ಕಂದಾಯ ಸ್ಥಾವರಗಳ ವಸೂಲಾತಿಯನ್ನು ಗಮನಿಸಿದಾಗ ಹುಬ್ಬಳ್ಳಿ ವೃತ್ತದ ಹುಬ್ಬಳ್ಳಿ ನಗರ ವಿಭಾಗದ ಬೇಡಿಕೆಯು ರೂ. 152.11 ಲಕ್ಷಕ್ಕೆ ವಸೂಲಾತಿಯು ರೂ. 151.89 ಲಕ್ಷ, ಹುಬ್ಬಳ್ಳಿ ಗ್ರಾಮೀಣ ವಿಭಾಗದ ಬೇಡಿಕೆ ರೂ. 55.10 ಲಕ್ಷಕ್ಕೆ ರೂ. 50.10 ಲಕ್ಷ ವಸೂಲಾತಿ ಹಾಗೂ ಗದಗ ವಿಭಾಗದ ಬೇಡಿಕೆ ರೂ. 88.00 ಲಕ್ಷಕ್ಕೆ ರೂ. 83.08 ಲಕ್ಷ ವಸೂಲಾತಿಯಾಗಿದ್ದು ಈ ಮೂರು ವಿಭಾಗಗಳಲ್ಲಿ ಒಟ್ಟು ರೂ. 10.10 ಲಕ್ಷ ಕಡಿಮೆಯಾಗಿರುವುದನ್ನು ಗಮನಿಸಿ ಇದರ ಕುರಿತು ಕ್ರಮ ಜರುಗಿಸಲು ವಲಯದ ಮುಖ್ಯ ಇಂಜಿನೀಯರ್ (ವಿ) ಇವರಿಗೆ ಸೂಚಿಸಲಾಯಿತು. ಈ ವೃತ್ತದ ವಸೂಲಾತಿಯು ತೀರಾ ಕಡಿಮೆಯಾಗಿದ್ದು, ಬೇಡಿಕೆಯಷ್ಟು ಸಹ ವಸೂಲಾತಿಯು ಆಗಿರುವುದಿಲ್ಲ ಹಾಗೂ ನಿಗದಿ ಪಡಿಸಿದ ಗುರಿಗೆ ವಸೂಲಾತಿಯು ಕೇವಲ ಶೇ. 24.80 ರಷ್ಟು ಆಗಿರುತ್ತದೆ. ವಸೂಲಾತಿ ಗುರಿಯನ್ನು

ಸಾಧಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿ ಪ್ರಗತಿ ಸಾಧಿಸಲು ವೃತ್ತ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿ ಮಾಹಿತಿ ಸಲ್ಲಿಸುವಂತೆ ಸೂಚಿಸಿದರು.

ಹಾವೇರಿ ವೃತ್ತದ ರಾಣೆಬೆನ್ನೂರ ವಿಭಾಗದ ಬೇಡಿಕೆಯು ರೂ. 108.88 ಲಕ್ಷಕ್ಕೆ ವಸೂಲಾತಿಯು ರೂ. 107.61 ಲಕ್ಷವಾಗಿದ್ದು, ರೂ. 1.27 ರಷ್ಟು ಕಡಿಮೆಯಾಗಿರುತ್ತದೆ. ಈ ವೃತ್ತದ ಅಂತಿಮ ಶಿಲ್ಕು ರೂ. 455.88 ಲಕ್ಷ ಇದ್ದು, ಡಿಸೆಂಬರ್-2012 ರಲ್ಲಿ ಪ್ರತಿ ಶತ 10 ರಷ್ಟು ಅಂದರೆ ರೂ. 45.00 ಲಕ್ಷದಷ್ಟು ವಸೂಲಾತಿ ಮಾಡಬೇಕೆಂದು ಗುರಿ ನಿಗದಿ ಪಡಿಸಲಾಯಿತು. ಲಾಂಗ್‌ಡಿಸ್ ಸ್ಥಾವರಗಳ ಬಾಕಿ ಮೊತ್ತ ರೂ. 264.63 ಕ್ಕೆ 'ಸಿ' ಫಾರ್ಮ ನೀಡಿದ ಮೇಲೆ ಶೇ. 3 ರಷ್ಟು ಅಂದರೆ ರೂ. 6.00 ಲಕ್ಷದಷ್ಟು ವಸೂಲಾತಿ ಮಾಡಲು ಸೂಚಿಸಲಾಯಿತು.

ಶಿರಸಿ ವೃತ್ತವು ವಸೂಲಾತಿಯಲ್ಲಿ ಪ್ರಗತಿ ಸಾಧಿಸಿದ್ದು, ಈ ವೃತ್ತದ ಲಾಂಗ್‌ಡಿಸ್ ಸ್ಥಾವರಗಳ ಬಾಕಿ ಮೊತ್ತ ರೂ. 48.38 ಲಕ್ಷಗಳ ವಸೂಲಾತಿಗೆ ಕ್ರಮ ಜರುಗಿಸಲು ಸೂಚಿಸಲಾಯಿತು. ಮುಂದಿನ ಅವಧಿಯಲ್ಲಿ ನಿಗದಿ ಪಡಿಸಿದ ವಸೂಲಾತಿ ಗುರಿಯನ್ನು ಸಾಧಿಸಲು ಶಾಖೆ/ಉಪವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಲೈನ್‌ಮನ್/ಜಿ.ವಿ.ಪಿ/ಶಾಖಾಧಿಕಾರಿಯವರಿಗೆ ವೈಯಕ್ತಿಕ ಜವಾಬ್ದಾರಿಯನ್ನು ವೃತ್ತದ ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ ಇವರು ನಿಗದಿ ಪಡಿಸಿ ಸಿಬ್ಬಂದಿವಾರು ಹಂಚಿಕೆ ಮಾಡಿದ ಕಂದಾಯ ವಸೂಲಾತಿ ಗುರಿಯನ್ನು ಸಾಧಿಸಲು ಸೂಚಿಸಿದರು. ಇದೇ ರೀತಿಯಾಗಿ ಹಾವೇರಿ ವೃತ್ತದಲ್ಲಿ ಬೇಡಿಕೆಯಷ್ಟು ವಸೂಲಾತಿಯು ಆಗಿರುವುದಿಲ್ಲ ಹಾಗೂ ಕಾರ್ಯ ಕ್ಷಮತೆಯೂ ಅಷ್ಟೊಂದು ತೃಪ್ತಿಕರವಾಗಿರುವುದಿಲ್ಲ. ಇದು ಕೇವಲ ಶೇ. 68.14 ರಷ್ಟು ಇದ್ದು, ಸಭೆಯಲ್ಲಿ ನಿರ್ದೇಶಿಸಿದಂತೆ ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಪ್ರಗತಿಯನ್ನು ಸಾಧಿಸಲು ಸೂಚಿಸಲಾಯಿತು.

ಬೆಳಗಾವಿ ವೃತ್ತದ ಬೆಳಗಾವಿ ಶಹರ ವಿಭಾಗದ ಬೇಡಿಕೆಯು ರೂ. 454.76 ಲಕ್ಷ ಇದ್ದು, ವಸೂಲಾತಿಯು ರೂ. 440.28 ಲಕ್ಷ, ಗ್ರಾಮೀಣ ವಿಭಾಗದ ಬೇಡಿಕೆಯು ರೂ. 142.89 ಲಕ್ಷ ಇದ್ದು ವಸೂಲಾತಿಯು ರೂ. 141.53 ಇರುತ್ತದೆ. ಘಟಪ್ರಭಾ ಹಾಗೂ ಬೈಲಹೊಂಗಲ ವಿಭಾಗಗಳನ್ನು ಹೊರತು ಪಡಿಸಿ ಈ ವೃತ್ತದಲ್ಲಿ ರೂ. 15.08 ಲಕ್ಷ ಕಡಿಮೆ ವಸೂಲಾತಿಯಾಗಿದ್ದು, ಮುಂದಿನ ದಿನಗಳಲ್ಲಿ ವಸೂಲಾತಿ ಗುರಿಯನ್ನು ಸಾಧಿಸಲು ಸೂಚಿಸಲಾಯಿತು ಹಾಗೂ ಲಾಂಗ್‌ಡಿಸ್ ಸ್ಥಾವರಗಳು ಒಳಗೊಂಡ ಮೊತ್ತ ರೂ. 148.23 ಲಕ್ಷಗಳ ವಸೂಲಾತಿ ಕ್ರಮ ಜರುಗಿಸಲು ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ ಇವರುಗಳಿಗೆ ಸೂಚಿಸಲಾಯಿತು.

ಚಿಕ್ಕೋಡಿ ವೃತ್ತದ ಎಲ್ಲಾ ವಿಭಾಗಗಳಲ್ಲಿ ವಸೂಲಾತಿಯು ಉತ್ತಮವಾಗಿದ್ದು ಇದೇ ರೀತಿಯಾಗಿ ಕಾರ್ಯನಿರ್ವಹಿಸಲು ಸೂಚಿಸಿ ಲಾಂಗ್‌ಡಿಸ್ ಸ್ಥಾವರಗಳು ಒಳಗೊಂಡ ಬಾಕಿ ಮೊತ್ತ ರೂ. 290.51 ಲಕ್ಷಗಳ ವಸೂಲಾತಿಗೆ ನಿರ್ದಿಷ್ಟವಾದ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮ ಜರುಗಿಸಲು ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ ಇವರುಗಳಿಗೆ ಸೂಚಿಸಲಾಯಿತು.

ಬಿಜಾಪೂರ ವೃತ್ತದ ಬಿಜಾಪೂರ ವಿಭಾಗದ ಬೇಡಿಕೆಯು ರೂ. 325.26 ಲಕ್ಷಕ್ಕೆ ರೂ. 302.28 ಲಕ್ಷ ಹಾಗೂ ಇಂಡಿ ವಿಭಾಗದ ಬೇಡಿಕೆಯು ರೂ. 77.70 ಲಕ್ಷಕ್ಕೆ ರೂ. 75.97 ಲಕ್ಷ ಆಗಿರುತ್ತದೆ. ಈ ಎರಡೂ ವಿಭಾಗಗಳಲ್ಲಿ ರೂ. 24.71 ಲಕ್ಷ ವಸೂಲಾತಿಯು ಕಡಿಮೆಯಾಗಿದ್ದು, ಬೇಡಿಕೆಯಷ್ಟು ಕೂಡ ವಸೂಲಾತಿಯು ಆಗಿರುವುದಿಲ್ಲ. ನಿಗದಿತ ಗುರಿಗೆ ಕೇವಲ ಶೇ. 54.56 ರಷ್ಟು ವಸೂಲಾತಿಯಾಗಿರುವುದನ್ನು ಗಂಭೀರವಾಗಿ ಪರಿಗಣಿಸಿ ಎರಡೂ ವಲಯದ ಮುಖ್ಯ ಇಂಜಿನೀಯರ್ (ವಿ) ರವರಿಗೆ ಬೇಡಿಕೆಯಷ್ಟು ವಸೂಲಾತಿ ಮಾಡದೇ ಇರುವ ವಿಭಾಗ/ವೃತ್ತದ ಅಧಿಕಾರಿಗಳಿಗೆ ಕಾರಣ ಕೇಳುವ ನೋಟೀಸ್‌ನ್ನು ಜಾರಿ ಮಾಡುವಂತೆ ಸೂಚಿಸಿದರು. ಇದಲ್ಲದೇ ನವ್ಹೆಂಬರ್-2012 ರ ತಿಂಗಳನ ಪ್ರಗತಿಯನ್ನೂ ಸಹ ಪರಿಶೀಲಿಸಿ ಸಂಬಂಧಿಸಿದ ಅಧೀಕ್ಷಕ

ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿಗಳಿಗೆ ಶಿಸ್ತು ಕ್ರಮ ಜರುಗಿಸಲು ವರದಿಯನ್ನು ಸಲ್ಲಿಸಲು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನಿರ್ದೇಶನ ನೀಡಿದರು.

ಬಾಗಲಕೋಟ ವೃತ್ತದ ವಸೂಲಾತಿ ಪ್ರಗತಿಯು ಶೇ. 61.44 ರಷ್ಟು ಇದ್ದು ಕಂದಾಯ ವಸೂಲಾತಿಗಾಗಿ ಹೆಚ್ಚಿನ ಆದ್ಯತೆ ನೀಡಿ ತಪ್ಪದೇ ಪ್ರಗತಿಯನ್ನು ಸಾಧಿಸುವಂತೆ ಸೂಚಿಸಿದರು. ಹಾಗೂ ಲಾಂಗ್‌ಡಿಸ್ ಸ್ಥಾವರಗಳ ಬಾಕಿ ಮೊತ್ತ ರೂ. 579.89 ಲಕ್ಷ ಇದ್ದು ವಸೂಲಾತಿಗಾಗಿ ಕ್ರಮ ಜರುಗಿಸುವಂತೆ ಮುಖ್ಯ ಇಂಜಿನೀಯರ್ (ವಿ)/ ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ ಇವರುಗಳಿಗೆ ಸೂಚಿಸಲಾಯಿತು.

ಬೆಳಗಾವಿ ವೃತ್ತದ ಅಧೀಕ್ಷಕ ಇಂಜಿನೀಯರ್ (ವಿ) ರವರು ಬೆಳಗಾವಿ ಶಹರ ಮತ್ತು ಗ್ರಾಮೀಣ ವಿಭಾಗಗಳಲ್ಲಿ ಅಂತಿಮ ಶಿಲ್ಕಿನ ಅನುಪಾತವು 0.19 ಹಾಗೂ 0.24 ಇರುವುದರಿಂದ ಬೇಡಿಕೆಯಷ್ಟು ವಸೂಲಾತಿಯಾಗಿರುವುದಿಲ್ಲ ಎಂದು ವಿವರಿಸಿದರು. ಆದರೆ ಅಂತಿಮ ಶಿಲ್ಕಿನ ಅನುಪಾತವು ಬೇಡಿಕೆ ಆಧಾರಿತವಾಗಿರುವುದರಿಂದ ಬೇಡಿಕೆ ಹೆಚ್ಚಾದಾಗ ಅನುಪಾತವು ಕಡಿಮೆಯಾಗುತ್ತದೆ ಹಾಗೂ ಬೇಡಿಕೆ ಕಡಿಮೆಯಾದಾಗ ಅನುಪಾತವು ಹೆಚ್ಚಾಗುತ್ತದೆ. ಕಾರಣ ಬೇಡಿಕೆಯಷ್ಟು ವಸೂಲಾತಿಯಾಗದೇ ಇರುವುದಕ್ಕೆ ಇದು ಸೂಕ್ತ ಕಾರಣವಲ್ಲವೆಂದು ಅಭಿಪ್ರಾಯ ಪಡುತ್ತಾ ಪ್ರತಿ ತಿಂಗಳು ನಿಗಮ ಕಛೇರಿಯಿಂದ ನಿಗದಿಪಡಿಸಿದ ಗುರಿಯಷ್ಟು ವಸೂಲಾತಿಯನ್ನು ಮಾಡಲೇಬೇಕೆಂದು ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು.

ಎಲ್.ಟಿ-3, ಎಲ್.ಟಿ-5, ಹೆಚ್.ಟಿ-2 ಮತ್ತು ಹೆಚ್.ಟಿ-4 ಪ್ರವರ್ಗಗಳಲ್ಲಿರುವ ಲಾಂಗ್‌ಡಿಸ್ ಸ್ಥಾವರಗಳ ಬಾಕಿ ವಸೂಲಾತಿಗಾಗಿ 'ಸಿ' ಫಾರ್ಮ ನೀಡಿ ವಸೂಲಾತಿ ಕ್ರಮ ಜರುಗಿಸುವಲ್ಲಿ ತುರ್ತು ಕ್ರಮ ಜರುಗಿಸಲು ಉಪಲೆಕ್ಕನಿಯಂತ್ರಣಾಧಿಕಾರಿ/ನಿಯಂತ್ರಣಾಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಲಾಯಿತು.

ಡಿಸೆಂಬರ್-2012 ರ ಕಂದಾಯ ವಸೂಲಾತಿ ಗುರಿಯನ್ನು ನಿಗದಿ ಪಡಿಸಲು ನವ್ಹೆಂಬರ್-2012 ರ ಬೇಡಿಕೆ ಹಾಗೂ ಅಕ್ಟೋಬರ್-2012 ರ ನಿವ್ವಳ ಅಂತಿಮ ಶಿಲ್ಕಿನ ಶೇ. 5 ರಷ್ಟು ಹಾಗೂ ಲಾಂಗ್‌ಡಿಸ್ ಸ್ಥಾವರಗಳ ಮೊತ್ತದ ಶೇ. 5 ರಷ್ಟನ್ನು ಸೇರಿಸಿ ನಿಗದಿ ಪಡಿಸಲು ಸೂಚಿಸಲಾಯಿತು. ಆದಾಗ್ಯೂ ನವ್ಹೆಂಬರ್-2012 ರ ಬೇಡಿಕೆ ಲಭ್ಯವಾಗದೇ ಇದ್ದಲ್ಲಿ ಅಕ್ಟೋಬರ್-2012 ರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ಡಿಸೆಂಬರ್-2012 ರ ಕಂದಾಯ ವಸೂಲಾತಿ ಗುರಿ ನಿಗದಿ ಪಡಿಸುವಂತೆ ಸೂಚಿಸಲಾಯಿತು.

<u>ನವ್ಹೆಂಬರ್-2012 ರಲ್ಲಿ ಸಾಧಿಸಿದ ಕಂದಾಯ ವಸೂಲಾತಿ ಪ್ರಗತಿಯನ್ನು ಈ ನಡಾವಳಿಯೊಂದಿಗೆ ಲಗತ್ತಿಸಿದ್ದು, ಜಕಾತಿವಾರು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸಲು ಸೂಚಿಸಲಾಯಿತು (ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-5 ಹಾಗೂ ಹೆಚ್.ಟಿ-2 (ಎ) (ಬಿ) ಮತ್ತು ಹೆಚ್.ಟಿ-4)</u> (ಅನುಬಂಧ 1 ಹಾಗೂ 2) ಮುಂಬರುವ ತಿಂಗಳುಗಳಲ್ಲಿ ಕಡ್ಡಾಯವಾಗಿ ನಿಗದಿತ ವಸೂಲಾತಿ ಗುರಿಯನ್ನು ತಪ್ಪದೇ ಸಾಧಿಸುವಂತೆ ಸೂಚಿಸಿ ವಸೂಲಾತಿ ಗುರಿಯನ್ನು ಸಾಧಿಸದೇ ಇರುವ ವೃತ್ತಾಧಿಕಾರಿಗಳನ್ನು ಕರ್ತವ್ಯ ನಿರ್ಲಕ್ಷತೆ ಎಂದು ಪರಿಗಣಿಸಿ ಸೇವೆಯಿಂದ ಅಮಾನತ್ತುಗೊಳಿಸುವುದಾಗಿ ಎಚ್ಚರಿಕೆ ನೀಡಲಾಯಿತು ಹಾಗೂ ಶಿಸ್ತು ಕ್ರಮದ ಕುರಿತು ಸಂಬಂಧಿಸಿದ ಅಧಿಕಾರಿಗಳ ಮೇಲೆ ವರದಿಯನ್ನು ಸಲ್ಲಿಸಲು ಮುಖ್ಯ ಇಂಜಿನೀಯರ್ (ವಿ) ಇವರಿಗೆ ಸೂಚಿಸಲಾಯಿತು.

<u>ವೃತ್ತದ ಉಪಲೆಕ್ಕನಿಯಂತ್ರಣಾಧಿಕಾರಿಗಳು ತಮ್ಮ ದೈನಂದಿನ ಕರ್ತವ್ಯಗಳೊಂದಿಗೆ ಕೆಳಕಂಡ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಲಾಯಿತು.</u>

- ನಿಗಮ ಕಛೇರಿಯ ಸುತ್ತೋಲೆ ಸಂಖ್ಯೆ : ಹು.ವಿ.ಸ.ಕಂ.ನಿ/ಆಸ/ಉಲೆನಿ(ಕಂ)/3656/2006-07, ದಿನಾಂಕ : 01-12-2006 ರನ್ವಯ ಭೂ ಕಂದಾಯ ವಸೂಲಿ ಕಾಯ್ದೆ 1976 ರ ಪ್ರಕಾರ ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಸ್ಥಾವರಗಳ ಕಂದಾಯ ಬಾಕಿ ವಸೂಲಾತಿಗಾಗಿ ತೆಗೆದುಕೊಂಡ ಕ್ರಮಗಳ ಕುರಿತು ವಿಭಾಗ/ಉಪವಿಭಾಗ/ಶಾಖೆಗಳಲ್ಲಿ ನಿಗದಿತ ನಮೂನೆಯಲ್ಲಿ ನಿರ್ವಹಿಸಿದ

ತಃಖ್ತೆಗಳನ್ನು ಸ್ಥಾವರವಾರು ಖುದ್ದಾಗಿ ಪರಿಶೀಲಿಸಿ ವಸೂಲಾತಿ ದಕ್ಷತೆಯ ತಃಖ್ತೆಯಲ್ಲಿ ದಾಖಲಿಸಿದ ಅಂಕಿ ಅಂಶಗಳು ತಾಳೆ ಇರುವುದರ ಬಗ್ಗೆ ದೃಢೀಕರಿಸಿ ಸಾಧಿಸಿದ ಪ್ರಗತಿಯ ವರದಿಯನ್ನು ಪ್ರತಿ ತಿಂಗಳು ಸಲ್ಲಿಸುವಂತೆ ಸೂಚಿಸಲಾಯಿತು. (ಅನುಬಂಧ 3 ಹಾಗೂ ಸುತ್ತೋಲೆಯ ಪ್ರತಿಯನ್ನು ಲಗತ್ತಿಸಿದೆ).

- ನಿಗದಿತ ಅವಧಿಯೊಳಗಾಗಿ ಗ್ರಾಹಕರು ವಿದ್ಯುತ್ ಬಿಲ್ಲಿನ ಮೊತ್ತವನ್ನು ಪಾವತಿಸದೇ ಇದ್ದಲ್ಲಿ ವಿದ್ಯುತ್ ನಿಲುಗಡೆಗೊಳಿಸಿ ಕಂದಾಯ ವಸೂಲಿಯಾದ ನಂತರ ಮನರ್ ಸಂಪರ್ಕ ಕಲ್ಪಿಸಿದ ಸ್ಥಾವರಗಳಿಗೆ ನಿಯಮಾವಳಿಗಳ ಪ್ರಕಾರ ಮರು ಸಂಪರ್ಕ ಶುಲ್ಕವನ್ನು ಬೇಡಿಕೆ ಮಾಡಿ ವಸೂಲಾತಿ ಮಾಡಿದ್ದರ ಬಗ್ಗೆ ದಾಖಲೆಗಳನ್ನು ಸಂಪೂರ್ಣವಾಗಿ ಪರಿಶೀಲನೆ ಮಾಡುವುದು ಹಾಗೂ ಪ್ರತಿ ತಿಂಗಳು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ ವರದಿಯನ್ನು ಸಲ್ಲಿಸುವುದು. (ಅನುಬಂಧ 4 ರ (D & R) ಪ್ರತಿಯನ್ನು ಲಗತ್ತಿಸಿದೆ).
- ವಿದ್ಯುತ್ ನಿಲುಗಡೆಗೊಂಡ ಸ್ಥಾವರಗಳ ಬಾಕಿ ವಸೂಲಾತಿಗಾಗಿ ಅದೇ ಗ್ರಾಹಕರ ಇತರೆ ಚಾಲ್ತಿ ಸ್ಥಾವರಗಳನ್ನು ಪರಿಶೀಲಿಸಿ ಬಾಕಿ ಮೊತ್ತವನ್ನು ಸದರಿ ಸ್ಥಾವರಗಳ ಬಾಕಿಗೆ ಸೇರಿಸಿ ವಸೂಲಾತಿ ಮಾಡುವ ಕುರಿತು ಕ್ರಮ ಜರುಗಿಸುವುದು ಹಾಗೂ ವಿದ್ಯುತ್ ನಿಲುಗಡೆಗೊಂಡ ಸ್ಥಾವರಗಳಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಪಡೆಯುವ ಗ್ರಾಹಕರ ವಿರುದ್ಧ ಕ್ರಮ ಕೈಗೊಂಡು ವರದಿ ಸಲ್ಲಿಸುವುದು.

**ವಲಯದ ನಿಯಂತ್ರಣಾಧಿಕಾರಿಗಳು ತಮ್ಮ ದೈನಂದಿನ ಕರ್ತವ್ಯಗಳೊಂದಿಗೆ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಂತೆ ಸೂಚಿಸಲಾಯಿತು.**

- ಎಲ್ಲಾ ಜಕಾತಿ ಸ್ಥಾವರಗಳಲ್ಲಿ ಶೇ. 100 ರಷ್ಟು ಬಿಲ್ಲಿಂಗ್ ದಕ್ಷತೆಯನ್ನು ಸಾಧಿಸಿರುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಮಾಹಿತಿ/ವರದಿಯನ್ನು ವಿಭಾಗವಾರು/ಉಪವಿಭಾಗವಾರು ಸಲ್ಲಿಸುವುದು.
- ಎಲ್ಲಾ ಜಕಾತಿ ಸ್ಥಾವರಗಳಿಗೆ ಕಡ್ಡಾಯವಾಗಿ ಮಾಪಕವನ್ನು ಅಳವಡಿಸಿರುವ ಬಗ್ಗೆ ಖಚಿತಪಡಿಸಿಕೊಂಡು ವರದಿ ಸಲ್ಲಿಸುವುದು.
- ಎಲ್.ಟಿ-2, ಎಲ್.ಟಿ-3, ಎಲ್.ಟಿ-5 ಮತ್ತು ಎಲ್.ಟಿ-6 ಜಕಾತಿಗಳಲ್ಲಿ ಎಮ್.ಎನ್.ಆರ್. ಸ್ಥಾವರಗಳು ಕಂಡು ಬಂದಲ್ಲಿ ಕೂಡಲೇ ವಿಳಂಬವಿಲ್ಲದೇ ಬದಲಾವಣೆ ಮಾಡಲು ಸಂಬಂಧಿಸಿದವರಿಗೆ ಕ್ರಮ ಜರುಗಿಸಲು ತಮ್ಮ ಮುಖ್ಯ ಇಂಜಿನೀಯರ್ (ವಿ) ಇವರ ಮೂಲಕ ನಿರ್ದೇಶಿಸುವುದು.
- ಎಲ್ಲಾ ನೀರು ಸರಬರಾಜು ಮತ್ತು ಬೀದಿ ದೀಪ ಸ್ಥಾವರಗಳು ಹಾಗೂ ಸರ್ಕಾರಿ ಸ್ವಾಮ್ಯದ ಸ್ಥಾವರಗಳ ಮಾಪಕಗಳು ಸುಸ್ಥಿತಿಯಲ್ಲಿರುವ ಬಗ್ಗೆ, ನಿಯತಕಾಲಿಕವಾಗಿ ರೀಡಿಂಗ್ ಮಾಡಿದ್ದರ ಬಗ್ಗೆ, ಬಳಕೆಗನುಸಾರವಾಗಿ ಬೇಡಿಕೆ ಮಾಡಿರುವ ಬಗ್ಗೆ ಪರಿಶೀಲಿಸಿ ದೃಢೀಕರಿಸಿ ವರದಿಯನ್ನು ಸಲ್ಲಿಸುವುದು.
- ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಸ್ಥಾವರಗಳ ಬಾಕಿ ವಸೂಲಾತಿಗಾಗಿ ಕಂದಾಯ ಬಾಕಿ ಕಾಯ್ದೆ 1976 ರನ್ವಯ ಭೂ ಕಂದಾಯವೆಂದು ಪರಿಗಣಿಸಿ ವಸೂಲಾತಿ ಮಾಡಲು 'ಸಿ' ಫಾರ್ಮ ಜಾರಿಗೊಳಿಸಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಪ್ರತಿ ತಿಂಗಳು ನಿಲುಗಡೆಗೊಳಿಸುವ ಲಾಂಗ್‌ಡಿಸ್ ಸ್ಥಾವರಗಳನ್ನು ಖುದ್ದಾಗಿ ಪರಿಶೀಲಿಸಿ ನಿಯಮಾವಳಿಗಳ ಪ್ರಕಾರ ಮಾಪಕ, ಮಾರ್ಗ ಮತ್ತು ಕಂಪನಿ ಇತರೆ ಸಾಮಗ್ರಿಗಳನ್ನು ಕಳಚಿ ಉಗ್ರಾಣಕ್ಕೆ ಹಿಂದಿರುಗಿಸಿದ ಬಗ್ಗೆ ಖಚಿತಪಡಿಸಿಕೊಳ್ಳುವುದು ಹಾಗೂ ಸದರಿ ಲಾಂಗ್‌ಡಿಸ್ ಸ್ಥಾವರಗಳ ಗ್ರಾಹಕರ ಹೆಸರಿನಲ್ಲಿರುವ ಬೇರೊಂದು ಚಾಲ್ತಿ ಸ್ಥಾವರವನ್ನು ಗುರುತಿಸಿ ವಸೂಲಾತಿಗೆ ಕ್ರಮ ಕೈಗೊಂಡು ವರದಿಯನ್ನು ಸಲ್ಲಿಸುವುದು.

ವಲಯದ ಮುಖ್ಯ ಇಂಜಿನೀಯರ್ (ವಿ) ರವರು ಪ್ರತಿ ತಿಂಗಳು ನಿಗದಿ ಪಡಿಸಿದ ಕಂದಾಯ ವಸೂಲಾತಿ ಗುರಿಯನ್ನು ಲೈನ್‌ಮನ್ ಹಂತದವರೆಗೆ ಮರು ಹಂಚಿಕೆ ಮಾಡಿ ಆದೇಶದ ಪ್ರತಿಗಳನ್ನು 10 ನೇ ತಾರೀಖಿನೊಳಗಾಗಿ ನಿಗಮ ಕಛೇರಿಗೆ ಸಲ್ಲಿಸುವುದು.

**ವಿಭಾಗದ ಲೆಕ್ಕಾಧಿಕಾರಿಗಳು ಕಂದಾಯ ವಸೂಲಾತಿಯ ಬಗ್ಗೆ ತಮ್ಮ ದೈನಂದಿನ ಕರ್ತವ್ಯಗಳೊಂದಿಗೆ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವಂತೆ ಸೂಚಿಸಲಾಯಿತು.**

- ಉಪವಿಭಾಗ/ಕಂದಾಯ ಶಾಖೆಗಳಲ್ಲಿ ಬಾಕಿ ಪಾವತಿಸಿಬೇಕಾದ ಗ್ರಾಹಕರ ಯಾದಿ ತಯಾರಿಸಿ (Dis Connection Memos) ವಿದ್ಯುತ್ ನಿಲುಗಡೆಗಾಗಿ ಸಂಬಂಧಿತ ಶಾಖಾಧಿಕಾರಿಗೆ ಸಲ್ಲಿಸುವ ಮತ್ತು ಯಾದಿಗಳನ್ನು ಮರಳ ಪಡೆದು ಸೂಕ್ತ ಕ್ರಮ ಜರುಗಿಸುತ್ತಿರುವ ಕುರಿತು ಮೇಲ್ವಿಚಾರಣೆ ನಡೆಸುವುದು.
- ಸರ್ಕಾರದಿಂದ ಬಿಡುಗಡೆಯಾದ ಅನುದಾನದ ಮೊತ್ತವನ್ನು ನಿಗದಿತ ಅವಧಿಯಲ್ಲಿ ಪಡೆಯುವ ಸಲುವಾಗಿ ಸಂಬಂಧಿತ ಇಲಾಖೆಯ ಅಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ಅನುಸರಣೆ ಮಾಡುವುದು.
- ಕೋರ್ಟ ಪ್ರಕರಣಗಳು/ಜಾಗೃತ ದಳದ ಸಂಜ್ಞಾ ಮತ್ತು ಅಸಂಜ್ಞಾ ಪ್ರಕರಣಗಳನ್ನು ಸಕಾಲದಲ್ಲಿ ಸೂಕ್ತ ಕ್ರಮ/ವಿವರ ಒದಗಿಸಿ ಆದ್ಯತೆ ಮೇರಗೆ ವಿಲೇವಾರಿಗಾಗಿ ಕ್ರಮ ಕೈಗೊಳ್ಳುವುದು.
- ಕಂದಾಯ ಹಿಂಪಡೆಯುವ ಪಟ್ಟಿಗಳನ್ನು ಸಕಾಲದಲ್ಲಿ ತಯಾರಿಸಿ ಆಂತರಿಕ ಪರಿಶೋಧನೆಗೊಳಪಡಿಸಿ ಸೂಕ್ತ ಅಧಿಕಾರಿಯಿಂದ ಆದೇಶ ಪಡೆದು ಇತ್ಯರ್ಥಪಡಿಸುವುದು.
- ನಿಯಮಾನುಸಾರ ವಿದ್ಯುತ್ ನಿಲುಗಡೆಗೊಂಡ ಸ್ಥಾವರಗಳ ಠೇವಣಿ ಹೊಂದಾಣಿಕೆ ಮಾಡಿ ಕರಾರು ಪತ್ರವನ್ನು ರದ್ದು ಪಡಿಸಿ ವಿದ್ಯುತ್ ಬಾಕಿ ಮೊತ್ತಕ್ಕೆ ಫಾರ್ಮ ಎ, ಬಿ ಮತ್ತು ಸಿ ನೋಟೀಸುಗಳನ್ನು ವಿದ್ಯುಚ್ಛಕ್ತಿ ಬಾಕಿ ವಸೂಲಾತಿ ಕಾಯ್ದೆ 1976 ರನ್ವಯ ಸಕಾಲದಲ್ಲಿ ಜಾರಿಗೊಳಿಸುವುದು.
- ಎಮ್.ಟಿ. ಹಾಗೂ ಜಾಗೃತದಳದ ವರದಿ ಆಧಾರದ ಮೇಲೆ ತಯಾರಿಸಿದ ಹಿಂಬಾಕಿ ಬಿಲ್ಲನ್ನು ಬೇಡಿಕೆ ಮಾಡಿರುವ ಹಾಗೂ ಸಕಾಲದಲ್ಲಿ ವಸೂಲಾತಿಗೆ ಸೂಕ್ತ ಕ್ರಮ ಜರುಗಿಸುವುದು.
- ಭಾಗ್ಯಜ್ಯೋತಿ ಮತ್ತು ಕುಟೀರಜ್ಯೋತಿ ಸ್ಥಾವರಗಳ ರೀಡಿಂಗ್ ಮಾಡದೇ ಕಛೇರಿಯಲ್ಲಿಯೇ ಸದರಿ ಸ್ಥಾವರಗಳಿಗೆ 18 ಯುನಿಟ್ ನಿಗದಿಪಡಿಸಿ ಬಿಲ್ ಮಾಡುತ್ತಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ಬಿಜೆ/ಕೆಜೆ ಸ್ಥಾವರಗಳ ಮಾಪಕಗಳನ್ನು ಓದಿ ಗ್ರಾಹಕರಿಗೆ ಬಳಕೆಯನ್ವಯ ಬಿಲ್ಲು ನೀಡುತ್ತಿರುವುದನ್ನು ಪರಿಶೀಲಿಸುವುದು ಮತ್ತು ಸದರಿ ಸ್ಥಾವರಗಳ ವಿದ್ಯುತ್ ಪರಿಮಾಣವನ್ನು (Connected load) ತಪಾಸಣೆ ಮಾಡಿ ಸೂಕ್ತ ಕ್ರಮ ಜರುಗಿಸುವುದು.

**ಇತರೆ ವಿಷಯಗಳು :**

ಸಿಬ್ಬಂದಿ ಕೊರತೆಯಿಂದಾಗಿ ಶೇ. 100 ರಷ್ಟು ಬಿಲ್ಲಿಂಗ್ ದಕ್ಷತೆಯನ್ನು ಸಾಧಿಸಲು ಸಾಧ್ಯವಾಗದೇ ಇರುವುದನ್ನು ವೃತ್ತಾಧಿಕಾರಿಗಳು ತಿಳಿಸಲಾಗಿ ಹೊರಗುತ್ತಿಗೆದಾರರಿಂದ ರೀಡಿಂಗ್ ಕಾರ್ಯವನ್ನು ನಿರ್ವಹಿಸಲು ಕಾರ್ಯಯೋಜನೆಯನ್ನು ರೂಪಿಸಿಕೊಂಡು ಮಾಹಿತಿ ಸಲ್ಲಿಸಲು ಸೂಚಿಸಲಾಯಿತು.

**ಕಾಮಗಾರಿಗಳ ಕುರಿತು ಚರ್ಚೆ :**

ಸಭೆಯಲ್ಲಿ ಹಾಜರಿದ್ದ ಎಲ್ಲಾ ಮುಖ್ಯ ಇಂಜಿನೀಯರ್ (ವಿ) ಹಾಗೂ ಅಧೀಕ್ಷಕ ಇಂಜಿನೀಯರ್ (ವಿ) ರವರಿಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾಮಗಾರಿಗಳನ್ನು ಪ್ರತಿ ವಾರಕ್ಕೊಮ್ಮೆ ಪ್ರಗತಿ ಪರಿಶೀಲನೆ ಮಾಡಿ ಸದರಿ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಕಾರ್ಯಗತಗೊಳಿಸಲು ತಮ್ಮ ಅಧೀನ ಕ್ಷೇತ್ರಾಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಸೂಕ್ತ ನಿರ್ದೇಶನ ನೀಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸಲಾಯಿತು. ಈ ದಿಸೆಯಲ್ಲಿ ಎಲ್ಲ ಅಧೀಕ್ಷಕ ಇಂಜಿನೀಯರ್ (ವಿ) ತಮ್ಮ ವೃತ್ತ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳು ನಿಗದಿತ ಅವಧಿಯೊಳಗೆ ಕಾರ್ಯಗತಗೊಳಿಸದೇ ಇದ್ದರೆ ಸಂಬಂಧಪಟ್ಟ ವೃತ್ತಾಧಿಕಾರಿಗಳನ್ನೇ ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವುದೆಂದು ತಿಳಿಸಲಾಯಿತು.

ಮುಂದುವರೆದಂತೆ ದಿನಾಂಕ : 15-12-2012 ರೊಳಗಾಗಿ ಎಲ್ಲಾ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿ ವಿವರವಾದ ಮಾಹಿತಿಯನ್ನು ಸಲ್ಲಿಸಲು ತಿಳಿಸಲಾಯಿತು.

[ಕರಡು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ]

10/12/12

**ಆರ್ಥಿಕ ಸಲಹೆಗಾರರು,** I/c

**ಪ್ರತಿಯನ್ನು ಮಾಹಿತಿ ಹಾಗೂ ಕಟ್ಟುನಿಟ್ಟಿನ ಅನುಸರಣೆಗಾಗಿ :**

1. ಮುಖ್ಯ ಇಂಜಿನೀಯರ್ (ವಿ)/ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವಲಯ, ಹು.ವಿ.ಸ.ಕಂ.ನಿ., ಬೆಳಗಾವಿ/ಹುಬ್ಬಳ್ಳಿ.
2. ಅಧೀಕ್ಷಕ ಇಂಜಿನೀಯರ್ (ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕಾರ್ಯ ಮತ್ತು ಪಾಲನೆ ವೃತ್ತ, ಹು.ವಿ.ಸ.ಕಂ.ನಿ, ಬೆಳಗಾವಿ/ಚಿಕ್ಕೋಡಿ/ಬಿಜಾಪೂರ/ಬಾಗಲಕೋಟ/ಹುಬ್ಬಳ್ಳಿ/ಹಾವೇರಿ/ಶಿರಸಿ.
3. ಕಾರ್ಯನಿರ್ವಾಹಕ ಇಂಜಿನೀಯರ್ (ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಹು.ವಿ.ಸ.ಕಂ.ವಿ. ಹುಬ್ಬಳ್ಳಿ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ ಧಾರವಾಡ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ ಗದಗ/ಶಿರಸಿ/ ಕಾರವಾರ/ ಹಾವೇರಿ/ ರಾಣೆಬೆನ್ನೂರು/ ಬೆಳಗಾವಿ ಶಹರ ವಿಭಾಗ ಮತ್ತು ಗ್ರಾಮೀಣ ವಿಭಾಗ/ಬೈಲಹೊಂಗಲ್/ಘಟಪ್ರಭಾ/ಚಿಕ್ಕೋಡಿ/ಅಥಣಿ/ರಾಯಬಾಗ/ವಿಜಾಪೂರ/ಇಂಡಿ/ಬಾಗಲಕೋಟ/ ಜಮಖಂಡಿ/ ಮುಧೋಳ.
4. ಕಂದಾಯ ಎಮ್.ಎಫ್.
5. ಎಮ್.ಎಫ್.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಅನುಬಂಧ-1

ನವ್ಹಂಬರ್-2012 ರ ____________ವಲಯ/ವೃತ್ತ/ವಿಭಾಗ/ಉಪವಿಭಾಗ/ಶಾಖೆಯ ಕಂದಾಯ ಬೇಡಿಕೆ, ವಸೂಲಿ ಹಾಗೂ ಗುರಿ ಸಾಧನೆಯ ವಿವರ (ಶಹರ ಪ್ರದೇಶಗಳಿಗೆ)

(ರೂ. ಲಕ್ಷಗಳಲ್ಲಿ)

| ಅ. ಸಂ | ವಲಯ/ವೃತ್ತ/ ವಿಭಾಗ/ಉಪವಿ ಭಾಗ/ಶಾಖೆ | ಜಕಾತಿ | ಸ್ಥಾವರಗಳ ಸಂಖ್ಯೆ | ವಿದ್ಯುತ್ ಬಳಕೆ (ಯೂನಿಟ್‌ಗಳಲ್ಲಿ) | ಆರಂಭಿಕ ಶುಲ್ಕ | | ಬೇಡಿಕೆ | ಗುರಿ | ವಸೂಲಿ | | | | ಪಾವತಿಸಿದ ವಿವರಗಳು | | | | | | | | ಎ.ಆರ್.ಡಿ | ಎ.ಆರ್.ಆರ್ | ವಸೂಲಾತಿ ಸಾಮರ್ಥ್ಯ | | ಅನುಪಾತ | ಷರಾ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | ನಗದು | ನಗದು ಹೊಂದಾಣಿಕೆ ಮೂಲಕ | ಇತರೆ ಹೊಂದಾಣಿಕೆ ಮೂಲಕ | ಒಟ್ಟು | ಗಡುವಿನ ದಿನಾಂಕದೊಳಗಾಗಿ | | ಬಡ್ಡಿ ಸಹಿತ ಗಡುವಿನ ದಿನಾಂಕದೊಳಗಾಗಿ | | ವಿದ್ಯುತ್ ನಿಲುಗಡೆ ದಿನಾಂಕದ ನಂತರ | | ವಿದ್ಯುತ್ ನಿಲುಗಡೆ ಮಾಡಿದ ನಂತರ | | | | ಬೇಡಿಕೆ ಅನುಸಾರ | ಗುರಿ ಅನುಸಾರ | | |
| | | | | | | | | | | | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 |
| | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | |

ನಿಯಂತ್ರಣಾಧಿಕಾರಿಗಳು,
ಕಾರ್ಯ ಮತ್ತು ಪಾಲನೆ ವಲಯ,
ಹುಬ್ಬಳ್ಳಿ/ಬೆಳಗಾವಿ.

ಮುಖ್ಯ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನೆ ವಲಯ,
ಹುಬ್ಬಳ್ಳಿ/ಬೆಳಗಾವಿ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

**ಅನುಬಂಧ-2**

ನವ್ಹಂಬರ್-2012 ರ ____________ವಲಯ/ವೃತ್ತ/ವಿಭಾಗ/ಉಪವಿಭಾಗ/ಶಾಖೆಯ ಕಂದಾಯ ಬೇಡಿಕೆ, ವಸೂಲಿ ಹಾಗೂ ಗುರಿ ಸಾಧನೆಯ ವಿವರ (ಗ್ರಾಮೀಣ ಪ್ರದೇಶಗಳಿಗೆ)

(ರೂ. ಲಕ್ಷಗಳಲ್ಲಿ)

| ಅ.ಸಂ | ವಲಯ/ವೃತ್ತ/ವಿಭಾಗ/ಉಪವಿಭಾಗ/ಶಾಖೆ | ಜಕಾತಿ | ಸ್ಥಾವರಗಳ ಸಂಖ್ಯೆ | ವಿದ್ಯುತ್ ಬಳಕೆ (ಯೂನಿಟ್‌ಗಳಲ್ಲಿ) | ಆರಂಭಿಕ ಶುಲ್ಕ | | ಬೇಡಿಕೆ | ಗುರಿ | ವಸೂಲಿ | | | | ಪಾವತಿಸಿದ ವಿವರಗಳು | | | | | | | | ಎ.ಆರ್.ಡಿ | ಎ.ಆರ್.ಆರ್ | ವಸೂಲಾತಿ ಸಾಮರ್ಥ್ಯ | | ಅನುಪಾತ | ಷರಾ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | ನಗದು | ನಗದು ಹೊಂದಾಣಿಕೆ ಮೂಲಕ | ಇತರ ಹೊಂದಾಣಿಕೆ ಮೂಲಕ | ಒಟ್ಟು | ಗಡುವಿನ ದಿನಾಂಕದೊಳಗಾಗಿ | | ಬಡ್ಡಿ ಸಹಿತ ಗಡುವಿನ ದಿನಾಂಕದೊಳಗಾಗಿ | | ವಿದ್ಯುತ್ ನಿಲುಗಡೆ ದಿನಾಂಕದ ನಂತರ | | ವಿದ್ಯುತ್ ನಿಲುಗಡೆ ಮಾಡಿದ ನಂತರ | | | | ಬೇಡಿಕೆ ಅನುಸಾರ | ಗುರಿ ಅನುಸಾರ | | |
| | | | | | | | | | | | | | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 |
| | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | |
| | | | | | | | | | | | | | | | | | | | | | | | | | | |

ನಿಯಂತ್ರಣಾಧಿಕಾರಿಗಳು,
ಕಾರ್ಯ ಮತ್ತು ಪಾಲನೆ ವಲಯ,
ಹುಬ್ಬಳ್ಳಿ/ಬೆಳಗಾವಿ.

ಮುಖ್ಯ ಇಂಜಿನೀಯರ್ (ವಿ),
ಕಾರ್ಯ ಮತ್ತು ಪಾಲನೆ ವಲಯ,
ಹುಬ್ಬಳ್ಳಿ/ಬೆಳಗಾವಿ.

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಅನುಬಂಧ-3

(ಮೊತ್ತ ರೂ ಗಳಲ್ಲಿ)

R. D. Act-1976 ರ ಪ್ರಕಾರ ದೀರ್ಘಕಾಲದಿಂದ ವಿದ್ಯುತ್ ನಿಲುಗಡೆ ಹೊಂದಿದ ಸ್ಥಾವರಗಳ ಬಾಕಿ ವಸೂಲಾತಿಗೆ ತೆಗೆದುಕೊಂಡ ಕ್ರಮದ ವಿವರ

| ಕ್ರ.ಸಂ | ಆರ್.ಆರ್. ಸಂ | ಹೆಸರು | ಜಕಾತಿ | ಸ್ಥಾವರ ನಿಲುಗಡೆ ಹೊಂದಿದ ದಿನಾಂಕ | ಮಾಪಕ ತೆಗೆದ ದಿನಾಂಕ/ ಅಂತಿಮ ರೀಡಿಂಗ್ ದಾಖಲಿಸಿದ ವಿವರ | ಲೈನ ಹಾಗು ಮಾಪಕ ಡಿಸ್ ಮೆಂಟಲ್ ಮಾಡಿ, ಸಾಮಗ್ರಿಗಳನ್ನು ಉಗ್ರಾಣಕ್ಕೆ ಹಿಂತಿರುಗಿಸಿದ ದಿನಾಂಕ/ಎ.ಸಿ.ಕೆ ನಂಬರ | ಬಾಕಿ ಮೊತ್ತ | ಠೇವಣಿ ಹೊಂದಾಣಿಕೆ ಮಾಡಿದ್ದು | ನಿವ್ವಳ ಬಾಕಿ ಉಳಿದ ಮೊತ್ತ | 3 ತಿಂಗಳ ನೋಟೀಸ್ ಜಾರಿಗೊಳಿಸಿದ ದಿನಾಂಕ ಮತ್ತು ಪತ್ರ ಸಂಖ್ಯೆ | ಎ ಫಾರ್ಮ | ಬಿ ಫಾರ್ಮ | ಸಿ ಫಾರ್ಮ | ಗುರುತಿಸಿದ ಪರ್ಯಾಯ ಜಾಸ್ತಿ ಸ್ಥಾವರ | ವಸುಲಾತಿಗೆ ಕೈಗೊಂಡ ಕ್ರಮ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 |
| | | | | | | | | | | | | | | | |
| | | | | | | | | | | | | | | | |

ಉಪಲೆಕ್ಕನಿಯಂತ್ರಣಾಧಿಕಾರಿಗಳು,
ಕಾರ್ಯ ಮತ್ತು ಪಾಲನೆ ವೃತ್ತ,
ಹು.ವಿ.ಸ.ಕಂ.ನಿ. ______.